ಮಾಡಲ್ಪಟ್ಟಿರುವ ಜಮೀನಿನ ರೆವಿನ್ಯೂ-ರಿಜಿಸ್ಟ್ರಿಯನ್ನು ಸ್ಥಳದಲ್ಲಿ ವಾಸಮಾಡುವ
ನ ಮಗನಾದ ಸಿ. ಡಿ. ಯಂಬುವನ ಹೆಸರಿಗೆ ವರ್ಗ ಮಾಡಬಹುದೆಂಬದಾಗಿ ಪ್ರಾರ್ಥಿಸುತ್ತೇನೆ.

ರುಜು. ಯೆ. ಬಿ.

" ಮೇಲೆಕಂಡ ಸಿ. ಡಿ. ಯಂಬ ನಾನು, ಸದರೀ ತಖ್ತೇಯಲ್ಲಿ ಕಂಡ ಜಮೀನುಗಳ ರೆವಿನ್ಯು ರಿಜಿಸ್ಟ್ರಿಯು ನನ್ನ ಹೆಸರಿಗೆ ವರ್ಗ ಮಾಡಲ್ಪಡುವ ಬಗ್ಯೆ ಒಪ್ಪಿ ಯಿರುತ್ತೇನೆ.

ರುಜು ಸಿ. ಡಿ.

ತಖ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಸರ್ವೇ ನಂಬರ್.	ಹಿಸ್ಸಾ ನಂಬರ್.	ಮಿಸ್ಲಾನಿಯೇ ಅಷ್ಟಾಣಿ ಅಥವಾ ಕಾಣೀಯೇ.	ಬೀಜವಾರಿ.	ಜಮಾಬಂದಿ.
1	2	3	4	5	6	7	8

ನನ್ನ ರೂಬರೂ ಬರೆಯಲ್ಪಟ್ಟಿತು.

ರುಜು.

ರೆಜಿಸ್ಟ್ರಾರ್ ಅಥವಾ ಸಬ್ ರೆಜಿಸ್ಟ್ರಾರ್
(ಸಂದರ್ಭಾನುಸಾರ.)

ಮೊಕ್ತಾಂ
ತಾರೀಖು.

(2) ಸರ್ವೇ ನಂಬರು ಯಿಲ್ಲದಂಥಾ ಜಮೀನುಗಳ ವಿಷಯದಲ್ಲಿಯೂ ಹಾಂಗೂ ಇನಾಂ ಗ್ರಾಮಗಳು ಮುಂತಾದ ವಿಷಯದಲ್ಲಿಯೂ ಜಮೀನು ರಿಜಿಸ್ಟ್ರಿ ಮಾಡಲ್ಪಟ್ಟ ದಸ್ತಾವೇಜಿನ ಪ್ರಕಾರ ಚಕ್ಕು ಬಂದಿ ಮೂಲಕ ವಿವರಿಸಲ್ಪಡತಕ್ಕದ್ದು; ಮತ್ತು ತಖ್ತೇಯಲ್ಲಿ ಕಂಡ ತಮಾಂ ತಪಶೀಲ್‌ಗಳನ್ನೂ ವದಗಿಸುವದಕ್ಕೆ ಕಕ್ಷಿಗಾರರು ಅಸಮರ್ಥರಾಗಿರುವ ಸಬುಬಿನ ಮೇಲೆ ಸದರೀ ಅರ್ಜಿಯನ್ನು ಬರಸದೆ ಯಿರಕೂಡದು, ಪರಂತು ಜಮೀನುಗಳು ಫಲಾನೇವೆಂದು ಗೊತ್ತು ಮಾಡಲ್ಪಡುವ ಬಗ್ಯೆ ಸಾಕಾದ ಸಂಗತಿಗಳು ನಮೂದ್ ಮಾಡಿದರೆ ಸಾಕಾಗಿರುತ್ತೆ.

(3) ದಾಖಲೆ ಬಗ್ಯಾಗಿ, ರಿಜಿಸ್ಟ್ರಿಂಗ್ ಆಫೀಸರರು, ಪ್ರತಿ ಅರ್ಜಿಯ ಮೇಲೂ ಅದರಲ್ಲಿ ನಮೂದ್ ಮಾಡೋಣಾದ ದಸ್ತಾವೇಜು ರಿಜಿಸ್ಟ್ರಿ ಮಾಡಲ್ಪಟ್ಟ ರಿಜಿಸ್ಟರ್ ಬುಕ್ಕಿನ ಸಂಪುಟ ಮತ್ತು ಪುಟಗಳ ಸಂಖೆಯನ್ನು ನಮೂದಿಸತಕ್ಕದ್ದು.

ತಾರೀಖು 2ನೇ ಜುಲೈ 1887.

ನಂ. 47.—ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು; ಮತ್ತು ಸದರೀ ತಾರೀಖಿನಲ್ಲಿ ಬೆಳ್ಗೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷ್ಣರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ, ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಾರರಿಂದ ರುಜೂ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೇಸು ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಇಂಬೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುವ್ಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಅತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟೆ ಕಮ್ಮಿಷ್ನರವರಿಂದ ರುಜೂ ಮೊಹರ್ ಮಾಡೋಣಾದ ಬಂದು ಸರಟಿಫಿಕೇಟ್ ಅತನಿಗೆ ಕೊಡಲ್ಪಡುವದು. ತಪಶೀಲ್ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಆಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಆಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುರಕಾರಕ್ಕೆ ಕೊಟ್ಟುವಳೀ ಯಾಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕಿಸ್ತಿ ಪೈರೆಂಟ್.	ಯಾವಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
ನಂಜನಗೂಡು.	ಹೊನ್ನಾಳಿ.	ಕಂಚಿಗನಹಳ್ಳಿ.	ವೆಂಕಣ್ಣಾಚಾರು) ವ ಇತರ 3 ಜನರು	ಎ. ಸಂ. 335 58	ರೂ. ಅ. ಪೈ. 390 0 0	ರೂ. ಅ. ಪೈ 262 0 0	ರೂ. ಅ. ಪೈ. 206 14 8	ಸ್ ೧೮೮೭ನೇ ಇಸವಿ ಆಗಸ್ಟ್ ತಾರೀಖು 15ರಲ್ಲು ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರ ರೂಬರು.

ಹುಕ್ಕುಂ ಬಮೋಜೀಬ್,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರೆಟೇರಿ.